ಆರತಿಗೀತೆಯೆಂಬ ವೇದಾಂತಪ್ರಕರಣ
ಜಯದೇವ ಜಯದೇವ ಜಯ ಶ್ರೀಗುರುವರಗೆ

– ಸಂದೀಪ ದೀಕ್ಷಿತ, ಸಾಗರ

ಸದ್ಗುರು ಭಗವಾನ್ ಶ್ರೀಶ್ರೀಧರಸ್ವಾಮಿಗಳ ಕುರಿತಾದ 'ನಮಃ ಶಾಂತಾಯ ದಿವ್ಯಾಯ' ಎಂಬ ಮಂತ್ರದಷ್ಟೇ ಭಕ್ತರ ಮಾನಸದಲ್ಲಿ ಸ್ಥಿರವಾಗಿ ವಿರಾಜಮಾನವಾಗಿರುವುದು ಗುರುಭಕ್ತರಾದ ಸಾವಿತ್ರಕ್ಕನವರಿಂದ ರಚಿಸಲ್ಪಟ್ಟ ಪ್ರಸಿದ್ಧವಾದ **'ಜಯದೇವ ಜಯದೇವ ಜಯ ಶ್ರೀಗುರುವರಗೆ'** ಎಂಬ ಪೂರ್ಣದಾರತಿಯ ಗೀತೆ. ಈ ಆರತಿಯ ಗೀತೆಯು ಕೇವಲ ಸ್ತೋತ್ರರೂಪವಾಗಿ ಇರುವುದಷ್ಟೇ ಅಲ್ಲದೇ ವೇದಾಂತಶಾಸ್ತ್ರದ ಬಹುಮುಖ್ಯವಾದ ಪ್ರಮೇಯಗಳನ್ನು ತನ್ನಲ್ಲಿ ಒಳಗೊಂಡಿದೆ. ಬ್ರಹ್ಮದ ಸ್ವರೂಪಲಕ್ಷಣ, ತಟಸ್ಥಲಕ್ಷಣ , ಜಗತ್ತಿನ ಮಿಥ್ಯಾತ್ವವಿಚಾರ, ಜ್ಞಾನಿಲಕ್ಷಣ, ಗುರುವಿನ ಸ್ವರೂಪ ಇತ್ಯಾದಿ ವಿಷಯಗಳನ್ನು ಇಲ್ಲಿ ನೋಡಬಹುದಾಗಿದೆ.

'ಶಾಸ್ತ್ರೈಕದೇಶಸಂಬದ್ಧಂ ಶಾಸ್ತ್ರಕಾರ್ಯಾಂತರೇ ಸ್ಥಿತಮ್' ಎಂದು ಪ್ರಕರಣಗ್ರಂಥಗಳ ಲಕ್ಷಣವನ್ನು ಹೇಳಿರುವುದರಿಂದ, ಆತ್ಮತತ್ತ್ವವನ್ನು ಮತ್ತು ಅದನ್ನು ಉಪದೇಶಿಸುವ ಗುರುವಿನ ನಿಜವಾದ ಸ್ವರೂಪವನ್ನು ಸಾಮಾನ್ಯ ಜನರಿಗೂ ಮನಮುಟ್ಟುವಂತೆ ತಿಳಿಸುವ ಈ ಪೂರ್ಣದಾರತಿಯ ಗೀತೆಯನ್ನು ವೇದಾಂತಶಾಸ್ತ್ರದ ಒಂದು ಪ್ರಕರಣಗ್ರಂಥವೆಂದು ಹೇಳಿದರೆ ಅದು ಅತ್ಯಂತ ಸಮಂಜಸವಾಗುತ್ತದೆ. ಗಹನವಾದ ಉತ್ತರಮೀಮಾಂಸಾಶಾಸ್ತ್ರದ ಅನೇಕ ವಿಚಾರಗಳನ್ನು ಒಳಗೊಂಡಂತಹ ಈ ಆರತಿಯ ಗೀತೆಯು ಶ್ರವಣಾದಿಗಳಿಗೂ ಕೂಡ ಬಹು ಉಪಕಾರಿಯಾಗಿದೆ.

ಆರತಿ ಗೀತೆಯ ಕರ್ತೃಗಳು ಮತ್ತು ಅದರ ಉಗಮ

ಪೂರ್ಣದಾರತಿಗೀತೆಯಾದ 'ಜಯದೇವ ಜಯದೇವ ಜಯ ಶ್ರೀಗುರುವರಗೆ' ಎಂಬ ಗೀತೆಗೆ ಜನ್ಮಭೂಮಿಸ್ಥಾನವೆಂದರೆ ಅದು, ಭಗವಾನ್ ಸದ್ಗುರು ಶ್ರೀಧರಸ್ವಾಮಿಗಳ ಅತ್ಯಂತಭಕ್ತೆಯಾದ ಮತ್ತು ಅವರ ಪೂರ್ಣಾನುಗ್ರಹಕ್ಕೆ ಪಾತ್ರರಾದ ಶ್ರೀಮತಿ ಸಾವಿತ್ರಕ್ಕನವರು.

ಬಾಲ್ಯ :

ಸಾವಿತ್ರಕ್ಕನವರು, ಶ್ರೀಮತಿ ಲಕ್ಷ್ಮಕ್ಕ ಮತ್ತು ಹೆಗ್ಗೇರಿ ಶ್ರೀ ಕೇಶವ ಭಟ್ಟರ ಮಗಳು. ಸಾವಿತ್ರಕ್ಕನವರ ತಂದೆಯವರಾದ ಕೇಶವ ಭಟ್ಟರೂ ಮತ್ತು ತಾಯಿಯವರಾದ ಲಕ್ಷ್ಮಕ್ಕನವರೂ ಕೂಡ ಬಹುವಾಗಿ ಅಧ್ಯಾತ್ಮ ಮಾರ್ಗದಲ್ಲಿಯೇ ಇದ್ದವರು. ಯಾವುದು ಅತ್ಯಂತ ದುರ್ಲಭವೋ ಅಂತಹ ಸತ್ಪುರುಷರ ಆಶ್ರಯವು ಸಾವಿತ್ರಕ್ಕನವರಿಗೆ ತಮ್ಮ ಅತಿ ಸಣ್ಣವಯಸ್ಸಿನಿಂದಲೂ ಪ್ರಾಪ್ತವಾಗಿತ್ತು ಎನ್ನುವುದು ಅವರ ಪೂರ್ವಜನ್ಮ ಸುಕೃತ ವಿಶೇಷವನ್ನು ತೋರಿಸುತ್ತದೆ.

ಸಾವಿತ್ರಕ್ಕನವರಿಗೆ ಶ್ರೀ ಸುಬ್ರಾಯ ಭಾಗವತರೊಂದಿಗೆ ವಿವಾಹವಾಗಿತ್ತು. ಶ್ರೀ ಸುಬ್ರಾಯ ಭಾಗವತರೂ ಕೂಡ ಶೀಗೇಹಳ್ಳಿ ಮಠದಲ್ಲಿಯೇ ಸೇವೆಯನ್ನು ಮಾಡಿಕೊಂಡು ಅಲ್ಲಿಯೇ ಸದ್ಗುರುಗಳ ಬಳಿಯಲ್ಲಿ ವೇದಾಂತಶ್ರವಣ ಮನನಗಳನ್ನೂ ಮಾಡುತ್ತಿದ್ದರು.

ಆರತಿ ಗೀತೆಯ ಉಗಮ :

ಒಂದೆ ಶ್ರೀಮದಾದಿಶಂಕರ ಭಗವತ್ಪಾದರು ಶೃಂಗೇರಿಯಲ್ಲಿ ನೆಲಸಿ, ತಾವು ರಚಿಸಿದ ಭಾಷ್ಯಗಳನ್ನು ಪಾಠ ಮಾಡುತ್ತಿದ್ದ ಸಂದರ್ಭದಲ್ಲಿ, ಅಷ್ಟಾಗಿ ಜ್ಞಾನವಿಲ್ಲದ, ಕೇವಲ ಗುರುಭಕ್ತಿಯಲ್ಲಿ ಅತ್ಯಂತವಾಗಿ ನಿಷ್ಣಾತನಾಗಿದ್ದ 'ಗಿರಿ' ಎಂಬ ಬಾಲಕನಿಗೆ ತಮ್ಮ ಅನುಗ್ರಹ ಮಾತ್ರದಿಂದಲೇ ವಿದ್ಯಾಪ್ರಾಪ್ತಿಯಾಗುವಂತೆ ಮಾಡಿರುವುದು ಸರ್ವತ್ರ ಪ್ರಸಿದ್ಧವಾಗಿದೆ. ಅದೇ ರೀತಿಯಾದ ಇನ್ನೊಂದು ಘಟನೆ ಇದಾಗಿದೆ.

ಒಂದು ಬಾರಿ ಶೀಗೇಹಳ್ಳಿ ಮಠಕ್ಕೆ ಒಬ್ಬಳು ಭಕ್ತೆಯು ಬಂದಿದ್ದಳು. ಅವಳಿಗೆ ಸ್ವಲ್ಪ ಮಟ್ಟಿಗೆ ಭಾಷೆಯಲ್ಲಿ ಹಿಡಿತವಿದ್ದು ಹಾಗೆಯೇ ಸಾಹಿತ್ಯರಚನೆ ಮಾಡುವ ಯೋಗ್ಯತೆಯೂ ಕೂಡ

ಅಕ್ಕ. ಅವಳು ಶ್ರೀ ಶ್ರೀಧರ ಸ್ವಾಮಿಗಳ ಕುರಿತಾಗಿ ಮತ್ತು ದೇವರ ಕುರಿತಾಗಿ ಕೆಲವು ಪದ್ಯಗಳನ್ನು ಮಾಡಿ, ಅದನ್ನು ಶ್ರೀ ಶ್ರೀಧರ ಸ್ವಾಮಿಗಳ ಮುಂದೆ ಹಾಡಿ ತೋರಿಸಿದ್ದಳು. ಈ ಸಂದರ್ಭದಲ್ಲಿ ಗುರುಭಕ್ತೆಯಾದ ಸಾವಿತ್ರಕ್ಕನವರೂ ಅಲ್ಲಿಯೇ ಇದ್ದರು.

ಸ್ವಾಭಾವಿಕವಾಗಿ ಭಕ್ತಿಯೇ ಅಧಿಕವಾಗಿರುವ ಸಾವಿತ್ರಕ್ಕನವರಿಗೆ ತಾವೂ ಆ ಪದ್ಯಗಳನ್ನು ಹೇಳಿಕೊಂಡು ತನ್ನ ಗುರುಗಳಾದ ಶ್ರೀ ಶ್ರೀಧರ ಸ್ವಾಮಿಗಳನ್ನು ಸ್ತುತಿಸಬೇಕು, ಭಜಿಸಬೇಕು ಎಂದು ಅಪೇಕ್ಷೆಯು ಮನದಲ್ಲಿ ಮೂಡಿತು. ಅದ್ದರಿಂದ ಸಾವಿತ್ರಕ್ಕನವರು ಆ ಭಕ್ತೆಯ ಬಳಿಗೆ ಹೋಗಿ ತನಗೂ ಆ ಗೀತೆಗಳನ್ನು ಬರೆದು ಕೊಡುವಂತೆ ಬೇಡಿಕೊಂಡರು. ಆದರೆ ಆ ಭಕ್ತೆಯು ತಾನು ರಚಿಸಿದ ಗೀತೆಗಳನ್ನು ಸಾವಿತ್ರಕ್ಕನವರಿಗೆ ಬರೆದುಕೊಡದೇ, ಈಗ ಬರೆದು ಕೊಡುತ್ತೇನೆ ಆಗ ಬರೆದು ಕೊಡುತ್ತೇನೆ ಎಂದು ಹೇಳಿ ಸುಮ್ಮನಾಗುತ್ತಿದ್ದರು.

ಆದರೂ ಭಾವಿಕರಾದ ಸಾವಿತ್ರಕ್ಕನವರು ಏನಾದರೂ ಮಾಡಿ ಆ ಪದ್ಯವನ್ನು ಕಲಿತು ಗುರುವನ್ನು ಸ್ತುತಿಸಬೇಕು ಎಂದು ಭಾವಿಸಿ ಪುನಃ ಆ ಭಕ್ತೆಯ ಬಳಿ ಹೋಗಿ ಪದ್ಯಗಳನ್ನು ಬರೆದುಕೊಡುವಂತೆ ಪ್ರಾರ್ಥಿಸಿದರು. ಆಗ ಅಲ್ಲಿಯೇ ಇದ್ದಂತಹ ಶ್ರೀ ಶ್ರೀಧರಸ್ವಾಮಿಗಳು "ಏನು ಅವಳ ಹತ್ತಿರ ಬೇಡುತ್ತ ಕುಳಿತಿದ್ದಿಯೆ? ನೀನೂ ಅವಳ ಹಾಗೇ ಸ್ವತಂತ್ರವಾಗಿ ಬರೆಯದಾರದೆ ? ಹೋಗು, ಬರೆ" ಎಂದು ಅಪ್ಪಣೆ ಮಾಡಿದರು.

ಸರಿ, ಇಷ್ಟು ವಾಕ್ಯವು ಸದ್ಗುರುಗಳ ಮುಖದಿಂದ ಬರುತ್ತಿದ್ದಂತೆಯೇ, ಸದ್ಗುರು ವಾಕ್ಯಸಾಮರ್ಥ್ಯದಿಂದ ಶ್ರೀ ವಾಗ್ದೇವಿಯು ಶ್ರೀ ಸಾವಿತ್ರಕ್ಕನನ್ನು ಪ್ರವೇಶಿಸಿದಳು ಎಂದು ನಾವು ತಿಳಿಯಬಹುದಾಗಿದೆ. ಅಂದಿನಿಂದ ಅವರಿಗೆ ವಿಶೇಷವಾಗಿ ಗುರುಗಳನ್ನು ಸ್ತುತಿಸಿ ಪದ್ಯವೇ ಮೊದಲಾದ ಸಾಹಿತ್ಯವನ್ನು ರಚಿಸುವ ಸಾಮರ್ಥ್ಯವು ಬಂದೊದಗಿತು.

ಯಾವ ಸಾವಿತ್ರಕ್ಕನವರಿಗೆ ಮೊದಲು ವಿಶೇಷವಾಗಿ ಅಧ್ಯಯನ, ವಿದ್ಯೆಗಳು ಇರಲಿಲ್ಲವೋ, ಅದೇ ಸಾವಿತ್ರಕ್ಕನವರು ಗುರುಕೃಪೆಗೆ ಪಾತ್ರರಾಗಿ ಮುಂದೆ ವೇದಾಂತಾರ್ಥಗರ್ಭಿತವಾದ ಸರಳ ಸುಂದರ ಹಾಗೂ ಪ್ರಾಸಾದಿಕವಾದ ಪದ್ಯಗಳನ್ನು ಶ್ರೀ ಶ್ರೀಧರ ಸ್ವಾಮಿಗಳ ಕುರಿತಾಗಿ ರಚಿಸಿದರು. ಇದು ಆ ಸದ್ಗುರು ವಾಕ್ಯದ ಸಾಮರ್ಥ್ಯವೇ ಹೌದು, ಅದರಂತೆಯೇ ಸಾವಿತ್ರಕ್ಕನವರ ಗುರುಭಕ್ತಿಯ ಮಹಿಮೆಯೂ ಹೌದು.

ಸಾವಿತ್ರಕ್ಕನವರು ರಚಿಸಿದ ಆರತಿ ಗೀತೆಗಳು ಈ ಕೆಳಗಿನಂತಿವೆ.

ಪೂರ್ಣಾರತಿ – **'ಜಯದೇವ ಜಯದೇವ ಜಯ ಶ್ರೀಗುರುವರಗೆ'**

ಭಾನುವಾರದ ಆರತಿ – **'ಭಾನುವಾರದಿ ಜಯಸ್ವಾನಂದದಾರತಿ'**

ಸೋಮವಾರದ ಆರತಿ – **'ಸ್ವಾಮಿ ಶ್ರೀಗುರುವಿಗೆ ಸೋಮವಾರದಲಿ'**

ಮಂಗಳವಾರದ ಆರತಿ – **'ಮಂಗಳವಾರದಲಿ ಬೆಳಗುವೆ ಮಂಗಳಾರತಿಯ'**

ಬುಧವಾರದ ಆರತಿ – 'ಬುಧವಾರದಲ್ಲಾರತೀ ನಾ ಬೆಳಗುವೆ'
ಗುರುವಾರದ ಆರತಿ – 'ಹರುಷದಿಂ ಜಯದಾರತಿ ಗುರುವರಗೆ ಶುಭಗುರುವಾರದಿ'
ಶುಕ್ರವಾರದ ಆರತಿ – 'ಪರಮ ಮಂಗಳದಾರತಿ ಬೆಳಗುವೆನು'
ಶನಿವಾರದ ಆರತಿ – 'ಘನಚಿದಾತ್ಮನ ನಾಮ ಸ್ಮರಿಸುತಲಿ'

ಮುಂದೆ ಸಾವಿತ್ರಕ್ಕನವರು ಗುರುವಿನ ಆಜ್ಞೆಯಂತೆ ನಿತ್ಯದಲ್ಲಿಯೂ ಶಿವಮಂತ್ರವನ್ನು ಅತ್ಯಧಿಕವಾಗಿ ಜಪಿಸಿ. ಕಾಶಿಯೇ ಮೊದಲಾದ ಕ್ಷೇತ್ರಗಳಲ್ಲಿ ನೆಲಸಿ. ಅನುಷ್ಠಾನವನ್ನು ಕೈಗೊಂಡು ಸದ್ಗುರುವಿನ ಪೂರ್ಣವಾದ ಕೃಪೆಗೆ ಪಾತ್ರರಾದರು ಎಂದು ಶ್ರೀ ಶ್ರೀಧರ ಸ್ವಾಮಿಗಳ ಚರಿತ್ರೆಯು ತಿಳಿಸುತ್ತದೆ.

ಶ್ರೀಮತಿ ಸಾವಿತ್ರಕ್ಕನವರು ರಚಿಸಿರುವ ಈ ಎಲ್ಲ ಗೀತೆಗಳು ಇಂದಿಗೂ ಭಕ್ತರ ಮಾನಸದಲ್ಲಿ ರಾರಾಜಿಸುತ್ತಿದೆ. ನಿತ್ಯದಲ್ಲಿ ಹೇಳುವ 'ಜಯದೇವ ಜಯದೇವ' ಎಂಬ ಪೂರ್ಣದಾರತಿ ಗೀತೆಯಂತೆಯೇ. ಆಯಾ ದಿನಕ್ಕೆ ಹೇಳಿರುವ ಆರತಿ ಗೀತೆಗಳನ್ನು ಹೇಳಿಕೊಂಡು ಸದ್ಗುರು ಮಹಾರಾಜರಿಗೆ ಭಕ್ತಿಭಾವದಲ್ಲಿ ಆರತಿಯನ್ನು ಬೆಳಗುವ ಅನೇಕರನ್ನು ಇಂದಿಗೂ ನೋಡಬಹುದಾಗಿದೆ.

ಈ ರೀತಿಯಾಗಿ ಒಂದೊಂದು ದಿನದಲ್ಲಿ ಒಂದೊಂದು ಆರತಿಗೀತೆಗಳನ್ನು ಹೇಳಿ ಆರತಿ ಬೆಳಗುವುದು. ಅದರೊಂದಿಗೆ ಪೂರ್ಣದಾರತಿಯನ್ನು ಕೂಡ ಹೇಳುವುದು ಎನ್ನುವ ಪ್ರಕ್ರಿಯೆಯು ನಮ್ಮ ಉಪಾಸನೆಯನ್ನು ಶಿಸ್ತುಬದ್ಧವಾಗಿ ಮಾಡುತ್ತದೆ. ಅಷ್ಟೇ ಅಲ್ಲದೇ ಉಪಾಸನೆಯಲ್ಲಿ ಒಂದು ಉತ್ತಮವಾದ ರುಚಿಯನ್ನು ಉಂಟುಮಾಡುತ್ತದೆ.

ಹೇಗೆ ಶ್ರೀಮಹಾಗಣಪತಿಗೆ ತರ್ಪಣವು ಪ್ರಿಯವೋ, ಶಿವನಿಗೆ ಅಭಿಷೇಕವು ಪ್ರಿಯವೋ, ಅಮ್ಮನವರಿಗೆ ನಾಮಪಾರಾಯಣೆ ಎನ್ನುವುದರಲ್ಲಿ ಪ್ರೀತಿಯೋ ಅದರಂತೇ ಗುರುಗಳಿಗೆ ಆರತಿಯಲ್ಲಿ ಪ್ರೀತಿ ಎಂದು ಸಾಕ್ಷಾತ್ ದತ್ತರಾದ ಶ್ರೀನೃಸಿಂಹಸರಸ್ವತೀ ಮಹಾಸ್ವಾಮಿಗಳು ಗುರುಚರಿತ್ರೆಯಲ್ಲಿ ಅಪ್ಪಣೆಮಾಡಿರುತ್ತಾರೆ.

ಇದರಂತೆಯೇ ಪ್ರಪಂಚದಲ್ಲಿ ಅನೇಕ ಶಾಸ್ತ್ರಗಳಿದ್ದರೂ ಕೂಡ ಗುರುಗಳಿಗೆ ಶಾಸ್ತ್ರರಾಜವಾದ ವೇದಾಂತಶಾಸ್ತ್ರದಲ್ಲಿ ಅಪ್ರತಿಮವಾದ ಪ್ರೀತಿಯು ಇರುತ್ತದೆ ಎಂಬುದು ಅಷ್ಟೇ ಪ್ರಸಿದ್ಧ. ಹೀಗೆ ಗುರುಗಳಿಗೆ ಇಷ್ಟವಾದ ಆರತಿ ಎಂಬ ಉಪಾಸನಾ ಪ್ರಕ್ರಿಯೆಗೆ, ವೇದಾಂತತತ್ತ್ವವನ್ನು ಒಳಗೊಂಡ ಪದ್ಯಗಳನ್ನು ಸೇರಿಸಿದರೆ ಅದು ಸದ್ಗುರುವಿನ ಕೃಪೆಗೆ ನಮ್ಮನ್ನು ಇನ್ನಷ್ಟು ಪಾತ್ರರನ್ನಾಗಿ ಮಾಡುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಇಂತಹ ವೇದಾಂತತತ್ತ್ವಗರ್ಭಿತವಾದ ಗೀತೆಗಳನ್ನು ನಮಗೆ ನೀಡಿರುವ ಸಾವಿತ್ರಕ್ಕನವರ ಕೃಪೆಯೂ ಅತ್ಯಂತ ಉತ್ಕೃಷ್ಟವಾದದ್ದು ಎಂದು ಅವರು ನಮಗೆ ಮಾಡಿರುವ ಉಪಕಾರ ಸ್ಮರಣೆಯನ್ನು ಮಾಡಬಹುದಾಗಿದೆ.

ಪಲ್ಲವಿ

ಜಯದೇವ ಜಯದೇವ ಜಯ ಶ್ರೀಗುರುವರಗೇ, ಜಯ ಸದ್ಗುರುವರಗೇ ॥

ಜಯ ಜಯ ನಿತ್ಯನಿರಂಜನನಿರುತಾನಂದನಿಗೇ ಜಯದೇವ ಜಯದೇವ ॥

ಪಲ್ಲವಿಯಲ್ಲಿ ಮೊದಲಿಗೆ 'ಶ್ರೀಗುರು' ಮತ್ತು 'ಸದ್ಗುರು' ಎಂದು ಸ್ತುತಿಯನ್ನು ಪ್ರಾರಂಭಿಸಿದ್ದಾರೆ. ಹಾಗಾಗಿ 'ಗುರು' ಎಂಬ ಪದದ ಅರ್ಥವು ಏನು ಎಂದು ತಿಳಿಯುವುದು ಸಮಂಜಸವಾಗಿರುತ್ತದೆ.

ಗಕಾರೋ ಜ್ಞಾನಸಂಪತ್ತಿಃ ರೇಫಸ್ತತ್ರಪ್ರಕಾಶಕಃ ।

ಉಕಾರಃ ಶಿವತಾದಾತ್ಮ್ಯಂ ಗುರುರಿತ್ಯಭಿಧೀಯತೇ ॥

ಅರ್ಥ: ಗುರುಯೆಂಬ ಪದದಲ್ಲಿನ ಗಕಾರವು ಜ್ಞಾನಸಂಪತ್ತಿನ ಸಂಕೇತವಾದರೆ, ರಕಾರವು ಅದರ ಪ್ರಕಾಶಕವಾಗಿದೆ. ಉಕಾರವು ಸಾಕ್ಷಾತ್ ಶಿವತಾದಾತ್ಮ್ಯವನ್ನು ತಿಳಿಸುತ್ತದೆ. ಇದು ಗುರುಪದದ ಮಹಿಮೆ.

ಶ್ರೀಗುರು ಎಂಬ ಪದಕ್ಕೆ ಸಮಾನಾರ್ಥಕವಾಗಿಯೇ ಸದ್ಗುರು ಎಂಬ ಪದವು ಪ್ರಸಿದ್ಧವಾಗಿದೆ. ಹೇಗೆ ಸಂಗೀತವನ್ನು ಹೇಳಿಕೊಡುವ ಗುರುಗಳಿಗೆ ಇವರು ನಮ್ಮ ಸಂಗೀತದ ಗುರುಗಳು ಎಂದೂ, ಗಣಿತವನ್ನು ಹೇಳಿಕೊಡುವವರಿಗೆ ಗಣಿತದ ಗುರುಗಳು ಎಂದು ಪ್ರಸಿದ್ಧವಿರುತ್ತದೆಯೋ ಅದರಂತೆಯೇ, **'ಸತ್'** ಎಂದರೆ ಬ್ರಹ್ಮ (**ಓಂತತ್ಸತದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ**). ಅಂತಹ ಬ್ರಹ್ಮವನ್ನು ತಿಳಿಸುವ, ಬ್ರಹ್ಮವಿದ್ಯೆಯನ್ನು ಉಪದೇಶಿಸುವ ಗುರುವಿಗೇ ಸದ್ಗುರುಗಳು ಎಂದು ಹೆಸರು ಬಂದಿದೆ ಎಂದು ತಿಳಿಯಬಹುದಾಗಿದೆ.

ಸದ್ಗುರುಗಳ ಮಹಿಮೆಯನ್ನು ಗುರುಗೀತೆಯಲ್ಲಿ ಹೀಗೆ ಹೇಳಲಾಗಿದೆ.

ಯಸ್ಯಾನುಗ್ರಹಮಾತ್ರೇಣ ಹೃದಿ ಹ್ಯುತ್ಪದ್ಯತೇ ಕ್ಷಣಾತ್ ।
ಜ್ಞಾನಂ ಚ ಪರಮಾನಂದಃ ಸದ್ಗುರುಃ ಶಿವ ಏವ ಸಃ ॥

ಅರ್ಥ : ಯಾರ ಅನುಗ್ರಹಮಾತ್ರದಿಂದ ಹೃದಯದಲ್ಲಿ ಜ್ಞಾನವೂ ಪರಮಾನಂದವೂ ಉದ್ಭವಿಸುತ್ತದೆಯೋ ಅಂತಹ ಸದ್ಗುರುವು ಶಿವನೇ ಆಗಿದ್ದಾನೆ ಎಂದು ಈ ಶ್ಲೋಕದ ಅರ್ಥ. ಶ್ರೀ ಸಮರ್ಥ ರಾಮದಾಸರು ದಾಸಬೋಧದಲ್ಲಿ ಸದ್ಗುರುವಿನ ಲಕ್ಷಣವನ್ನು ಹೀಗೆ ಹೇಳಿದ್ದಾರೆ.

ಜೋ ಬ್ರಹ್ಮಜ್ಞಾನ ಉಪದೇಶಿ । ಅಜ್ಞಾನ ಅಂಧಾರ ನಿರಸಿ ।
ಜೀವಾತ್ಮಯಾ ಶಿವಾತ್ಮಯಾಶೀ । ಐಕ್ಯತಾ ಕರೀ ॥

ಯಾರು ಬ್ರಹ್ಮಜ್ಞಾನವನ್ನು ಉಪದೇಶಿಸಿ ಅಜ್ಞಾನವನ್ನು ದೂರ ಮಾಡುತ್ತಾನೆಯೋ, ಯಾರು ಜೀವ ಮತ್ತು ಬ್ರಹ್ಮರ ಐಕ್ಯವನ್ನು ಉಪದೇಶಿಸಿ ಅದನ್ನು ಅನುಭವಕ್ಕೆ ಬರುವಂತೆ ಮಾಡುತ್ತಾನೆಯೋ ಅವನೇ ಸದ್ಗುರು. ಹೀಗೆ ಗುರು ಎಂಬ ಪದದ ಅರ್ಥವೂ ಮತ್ತು ಅವರ ಮಹಿಮೆಯು ಇರುತ್ತದೆ.

ಜಯ ಜಯ ನಿತ್ಯ ನಿರಂಜನ ನಿರುತಾನಂದನಿಗೆ

ಆರತಿಗೀತೆಯ ಪಲ್ಲವಿಯ ಎರಡನೇಯ ಪಾದದಲ್ಲಿ ನಿತ್ಯರಾದ ನಿರಂಜನರಾದ ನಿರುತಾನಂದರಾದ ಗುರುಗಳಿಗೆ ಜಯಜಯಕಾರವು ಎಂದು ಭಕ್ತಿಯಿಂದ ಸ್ತುತಿಸಿದ್ದಾರೆ. ಇಲ್ಲಿ ನಿತ್ಯ, ನಿರಂಜನ ಮತ್ತು ನಿರುತಾನಂದ ಎಂಬ ಪದಗಳು ಗುರುವಿನ ನಿಜವಾದ ಸ್ವರೂಪವನ್ನು ಕುರಿತು ಹೇಳುತ್ತಿವೆ.

ನಿತ್ಯ : ನಿತ್ಯವೆಂದರೆ ಯಾವಾಗಲೂ ಇರುವಂತಹದ್ದು ಎಂದರ್ಥ. ಪ್ರಾಪಂಚಿಕವಾದ ಪದಾರ್ಥಗಳು ಒಂದಿಷ್ಟು ಕಾಲದವರೆಗೆ ಇರುತ್ತವೆ. ಅನಂತರದಲ್ಲಿ ಅವು ನಾಶವಾಗುತ್ತವೆ. ಅವುಗಳೆಲ್ಲವುದಕ್ಕೂ ಆರು ರೀತಿಯಾದ ಭಾವವಿಕಾರಗಳು ಇರುತ್ತವೆ. ಆದ್ದರಿಂದ ಅವುಗಳನ್ನ ನಿತ್ಯವೆಂದು ಹೇಳಲು ಬರುವುದಿಲ್ಲ. ಆದರೆ ಬ್ರಹ್ಮವು/ ಆತ್ಮವು ಮಾತ್ರ ಎಂದಿಗೂ ನಾಶವಾಗುವುದಿಲ್ಲ ಮತ್ತು ಯಾವರೀತಿಯ ಮಾರ್ಪಡುವಿಕೆಗೂ ಒಳಪಡುವುದಿಲ್ಲ. ಆದ್ದರಿಂದ ನಿತ್ಯವೆಂದರೆ ಪರಬ್ರಹ್ಮವೆಂದೇ ಅರ್ಥ. ಇಲ್ಲಿ ಗುರುಗಳನ್ನು ನಿತ್ಯರೆಂದು ಹೇಳುವ ಮೂಲಕ ಗುರುಗಳು ಪರಬ್ರಹ್ಮಸ್ವರೂಪರೇ, ನಮ್ಮೆಲ್ಲರ ಆತ್ಮರೇ ಎಂದು ತಿಳಿಸಿದ್ದಾರೆ.

ನಿರಂಜನ – ಎಂದರೆ ಯಾವುದರ ಬಂಧವೂ ಇಲ್ಲದ ಶುದ್ಧಸ್ವರೂಪ. ಜ್ಞಾನ ಸ್ವರೂಪವೆಂದು ಅರ್ಥ.

ನಿರುತಾನಂದ – ಯಾವುದಾದರೂ ಭೋಗವಸ್ತುವಿನಿಂದಾಗಿ ಬರುವ ಆನಂದವು ಯಾವಾಗಲೂ ಇರುವಂತಹದ್ದು ಅಲ್ಲ. ಆ ವಸ್ತುವಿನ ಅಂತ್ಯವಾದೊಡನೆಯೇ ಅದರಿಂದ ಪ್ರಾಪ್ತವಾದ ಆನಂದವೂ ಅಂತ್ಯವಾಗುತ್ತದೆ. ಹೇಗೆ ಪುಣ್ಯವು ನಷ್ಟವಾದೊಡನೆಯೇ ಸ್ವರ್ಗವನ್ನು ಕಳೆದುಕೊಂಡು ಅದರ ಆನಂದದಿಂದ ವಂಚಿತನಾಗುತ್ತಾನೆಯೋ ಹಾಗೆ. ಕೆಲವೊಮ್ಮೆ ವಸ್ತುವು/ವಿಷಯವು ಅಧಿಕವಾಗಿ ದೊರೆತರೂ ಅದರಿಂದ ಆನಂದವು ಬರುತ್ತದೆ ಎಂಬುದೂ ಇರುವುದಿಲ್ಲ. ಅಧಿಕವಾಗಿ ಸಿಹಿಯ ಪದಾರ್ಥವನ್ನು ಈಗಾಗಲೆ ಸೇವಿಸಿರುವ ವ್ಯಕ್ತಿಗೆ ಅದೇ ಸಮಯದಲ್ಲಿ ಮತ್ತಷ್ಟು ಸಿಹಿ ಪದಾರ್ಥಗಳನ್ನು ಊಟಕ್ಕೆಂದು ಬಡಿಸಿದರೆ ಅದು ಅವನಿಗೆ ಆನಂದವನ್ನೇನು ಉಂಟು ಮಾಡದು, ಅಷ್ಟೇ ಅಲ್ಲದೇ ದುಃಖವನ್ನೂ ಉಂಟುಮಾಡೀತು!

ಆದರೆ ನಿರ್ವಿಷಯಕವಾದ ಆತ್ಮಾನಂದವು ಮಾತ್ರ ಶಾಶ್ವತವಾದದ್ದು. ಏಕೆಂದರೆ ಆನಂದವೆಂಬುದು ಆತ್ಮದ ಸ್ವರೂಪವೇ ಆಗಿದೆ. ಪ್ರಾಪಂಚಿಕವಾದ ಆನಂದಗಳು ಈ ಆತ್ಮಾನಂದದ ಒಂದು ಪುಟ್ಟ ತುಣುಕುಗಳು ಎಂದು ಉಪನಿಷತ್ತು ತಿಳಿಸಿರುತ್ತದೆ. ("ಪರಮಾನಂದಸ್ಯ ಮಾತ್ರಾ ಏಕದೇಶಃ") – ಪ್ರಾಪಂಚಿಕವಾದ ಆನಂದವು ನಮ್ಮ ಸ್ವರೂಪಾನಂದದ ಒಂದು ಪುಟ್ಟ ಭಾಗ ಎಂದು ಭಗವತ್ಪಾದಾಚಾರ್ಯರು ತೈತ್ತಿರೀಯ ಉಪನಿಷತ್ತಿನ ಭಾಷ್ಯದಲ್ಲಿ ಬ್ರಹದಾರಣ್ಯಕ ಶ್ರುತಿಯನ್ನು ಅನುಸರಿಸಿ ಹೇಳಿದ್ದಾರೆ.) ಶ್ರೀ ಶ್ರೀಧರಗುರುಗಳು ನಮ್ಮ ಆತ್ಮರೂಪಿಯೇ ಆಗಿರುವುದರಿಂದ ನಿರುತಾನಂದರೆಂದು ಸ್ತುತಿಸಿದ್ದಾರೆ.

ಇಲ್ಲಿ 'ನಿತ್ಯ'. 'ನಿರಂಜನ' ಮತ್ತು 'ನಿರುತಾನಂದ' ಎಂದು ಹೇಳುವ ಮೂಲಕ 'ಸತ್ಯ' 'ಜ್ಞಾನ' ಮತ್ತು 'ಆನಂದ' ಎಂಬ ಬ್ರಹ್ಮದ ಸ್ವರೂಪಲಕ್ಷಣವನ್ನು ತಿಳಿಸಿರುತ್ತಾರೆ.

ಮೂರುಗುಣಗಳ ಕಾರ್ಯದಿ ಸೇರದಿರುವವಗೆ
ತೋರುವ ಈ ವಿಶ್ವಕೆ ಆಧಾರವೆನಿಸಿಹಗೆ ।
ಧೀರನಾಗಿಹ ಚಿತ್ಸುಖ ಸಾರರೂಪನಿಗೆ
ನಾರೀನರ ಭೇದಗಳ್ಮತಿ ತೋರದ ಪ್ರಭುವರಗೆ ॥ 1 ॥

ಮೂರುಗುಣಗಳ ಕಾರ್ಯದಿ ಸೇರದಿರುವವಗೆ

ಮಾಯೆಯು ಸತ್ತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ಗುಣತ್ರಯಾತ್ಮಕವಾದದ್ದು. ಇಂತಹ ತ್ರಿಗುಣಾತ್ಮಕವಾದ ಮಾಯೆಯ ಕಾರ್ಯವು ಯಾವುದು ಎಂದರೆ ಅದು ನಾವು ನೋಡುತ್ತಿರುವ ಈ ಜಗತ್ತು. (ಮಾಯೆಯು ಜಗತ್ತಿಗೆ ಪರಿಣಾಮಿ ಉಪಾದಾನ ಕಾರಣ). ಆದರೆ ಈ ಮಾಯೆಗೆ ಅಧಿಪತಿಯಾದ ಪರಬ್ರಹ್ಮವು ಈ ಜಗತ್ತಿಗೆ ಅತೀತವಾಗಿ ಇರುತ್ತದೆ.

ಈ ರೀತಿಯಾಗಿ ಹೇಳುವಾಗ ಒಂದು ಸಂಶಯವು ಉಂಟಾಗುತ್ತದೆ. ಅದೇನೆಂದರೆ ಈ ಜಗತ್ತಿಗೆ ನಿಮಿತ್ತ ಕಾರಣವೂ ಮತ್ತು ಉಪಾದಾನ ಕಾರಣವೂ ಬ್ರಹ್ಮವೇ ಆಗಿರುವುದರಿಂದ ಉಪಾದಾನವಾದ ಬ್ರಹ್ಮವು ಈ ಜಗತ್ತಿನೊಳಗೆ ಹೇಗೆ ಸೇರುವುದಿಲ್ಲ? ಏಕೆಂದರೆ ಮಡಿಕೆಗೆ ಉಪಾದಾನಕಾರಣವಾದ ಮಣ್ಣು ಮಡಿಕೆಯಲ್ಲಿಯೇ ಇರುತ್ತದೆ ಅಲ್ಲವೇ? ಎಂದರೆ, ಆ ಸಂಶಯವನ್ನು ನಿವಾರಿಸಲು ಮುಂದಿನ ಸಾಲಿನಲ್ಲಿ ಬ್ರಹ್ಮವು ಜಗತ್ತಿಗೆ ಯಾವ ರೀತಿಯ ಉಪಾದಾನಕಾರಣವೆಂದು ತಿಳಿಸಿದ್ದಾರೆ.

ತೋರುವ ಈ ವಿಶ್ವಕೆ ಆಧಾರವೆನಿಸಿಹಗೆ

ಉಪಾದಾನ ಕಾರಣವು ಎರಡು ವಿಧವಾದದ್ದು.

1. **ಪರಿಣಾಮಿ ಉಪಾದಾನ** – ಮೊಸರಿಗೆ ಹಾಲು ಕಾರಣವಾದಂತೆ. ಇಲ್ಲಿ ಹಾಲೇ ಮೊಸರಾಗಿ ಪರಿವರ್ತನೆ ಆಗಿರುತ್ತದೆ.

2. **ವಿವರ್ತೋಪಾದಾನ** – ಕತ್ತಲೆಯಲ್ಲಿ ಹಗ್ಗವನ್ನು ತುಳಿದು ಹಾವೆಂದು ಭಾವಿಸಿದಾಗ, ಭ್ರಮೆಯಿಂದ ಕಲ್ಪಿತವಾದ ಹಾವಿಗೆ ಉಪಾದಾನ ಕಾರಣವು ಹಗ್ಗವೇ ಆಗಿರುತ್ತದೆ. ಆದರೆ ಇಲ್ಲಿ ಹಗ್ಗದ ಅಸ್ತಿತ್ವಕ್ಕೆ ಯಾವುದೇ ಭಂಗವಿರುವುದಿಲ್ಲ. ಹಗ್ಗವು ಹಾವಿಗೆ ಅತೀತವಾಗಿ ಇದ್ದೇ ಇರುತ್ತದೆ.

ಮೇಲೆ ಹೇಳಿದ ಉದಾಹರಣೆಯಂತೆಯೇ ಈ ಜಗತ್ತಿಗೆ ಬ್ರಹ್ಮವು ವಿವರ್ತೋಪಾದಾನವಾಗಿರುತ್ತದೆ. ವಿವರ್ತೋಪಾದಾನವು ತನ್ನ ಕಾರ್ಯಕ್ಕೆ ತಾನು ಆಧಾರವಾಗಿದ್ದರೂ

ಅದು ತನ್ನ ಕಾರ್ಯವನ್ನು ಮೀರಿರುತ್ತದೆ. ಈ ಕಾರಣದಿಂದಾಗಿ ಬ್ರಹ್ಮವು ಜಗತ್ತಿಗೆ ಆಧಾರವೂ ಹೌದು ಮತ್ತು ಅತೀತವೂ ಹೌದು.

ಶ್ರೀಧರಗುರುಗಳು ಪರಬ್ರಹ್ಮಸ್ವರೂಪರೇ ಆದ್ದರಿಂದ ಅವರನ್ನು ಈ ಜಗತ್ತಿಗೆ ಆಧಾರರೂಪರೆಂದು ಮತ್ತು ಜಗತ್ತಿಗೆ ಅತೀತರಾದವರೆಂದು ಸ್ತುತಿಸಿದ್ದಾರೆ.

ಮೂರುಗುಣಗಳಕಾರ್ಯದಿ ಸೇರದಿರುವವಗೆ – ಎಂದಿರುವುದರಿಂದ ಶ್ರೀಶ್ರೀಧರಸ್ವಾಮಿಗಳು ಗುಣಾತೀತರು. ಸ್ಥಿತಪ್ರಜ್ಞರು ಎಂದು ಹೇಳಿದೆ ಎಂದು ಕೂಡ ತಿಳಿಯಬಹುದಾಗಿದೆ. *(ಗುಣಾತೀತನ ಲಕ್ಷಣಗಳ ಕುರಿತಾಗಿ ಗೀತೆಯ 14ನೇ ಅಧ್ಯಾಯದಲ್ಲಿ ನೋಡಬಹುದಾಗಿದೆ.)*

ಧೀರನಾಗಿಹ

ದ್ವಿತೀಯಾದ್ವೈ ಭಯಂ ಭವತಿ (*ತನಗಿಂತ ಬೇರೆಯಾದ ಎರಡನೆಯ ವಸ್ತುವಿನಿಂದ ಭಯವು ಆಗುತ್ತದೆ.*) ಎಂಬುದಾಗಿ ಬೃಹದಾರಣ್ಯಕ ಶ್ರುತಿಯು ಹೇಳಿದೆ. ಜ್ಞಾನಿಯಾದವನಿಗೆ ಎಲ್ಲವೂ ಆತ್ಮರೂಪವಾಗಿಯೇ ಕಾಣುವುದರಿಂದ, ಆತನಿಗೆ ತನಗೆ ಬೇರೆಯಾದ ಎರಡನೇಯ ವಸ್ತುವೇ ಕಾಣುವುದಿಲ್ಲ. ತನಗಿಂತ ಬೇರೆಯಾದ ಯಾವ ವಸ್ತುವೂ ಕಾಣದಿರುವುದರಿಂದ ಜ್ಞಾನಿಯು ಎಲ್ಲೆಡೆಯೂ ಭಯರಹಿತನಾಗಿ ಇರುತ್ತಾನೆ. ಧೀರನಾಗಿ ಇರುತ್ತಾನೆ. ಇದನ್ನೇ ತೈತ್ತಿರೀಯದಲ್ಲಿ **'ಸೋಽಭಯಂಗತೋ ಭವತಿ'** ಎಂದು ಹೇಳಿದೆ. ಆದ್ದರಿಂದ ಗುರುಗಳನ್ನು ಧೀರನಾಗಿಹ ಎಂದು ಸ್ತುತಿಸಿದ್ದಾರೆ.

ನಾರೀನರ ಭೇದದೊಳ್ಮತಿ ತೋರದ ಪ್ರಭುವರಗೆ

ಬ್ರಹ್ಮಜ್ಞಾನಿಯಾದವನು ಎಲ್ಲೆಡೆಯೂ ಆತ್ಮಸ್ವರೂಪವನ್ನೇ ನೋಡುತ್ತಾನೆ. ಅದರಂತೆಯೇ ಬ್ರಹ್ಮಜ್ಞಾನಿಗಳಾದ ಶ್ರೀ ಶ್ರೀಧರಸ್ವಾಮಿಗಳು ಯಾವಾಗಲೂ ಪ್ರಾಪಂಚಿಕವಾದ ಸ್ತ್ರೀ, ಪುರುಷ, ಕಪ್ಪು, ಬಿಳುಪುಗಳೆಂಬ ನಾಮರೂಪಗಳನ್ನು ನೋಡದೇ ಎಲ್ಲವನ್ನೂ ಆತ್ಮರೂಪರಾಗಿಯೇ ನೋಡುತ್ತಿದ್ದರು ಎಂದು ಈ ವಾಕ್ಯವು ತಿಳಿಸುತ್ತದೆ. ಗೀತೆಯಲ್ಲಿ **'ಪಂಡಿತಾಃ ಸಮದರ್ಶಿನಃ'** ಎಂದಿದೆ. ಪಂಡಿತರಾದವರು (ಆತ್ಮವಿಷಯವಾದ ಬುದ್ಧಿಯುಳ್ಳವರು) ಎಲ್ಲೆಡೆ ಸಮವನ್ನೇ ಅಂದರೆ ಬ್ರಹ್ಮವನ್ನೇ ಕಾಣುತ್ತಾರೆ ಎಂದು ಇದರ ಅರ್ಥ.

ಗಣನೆಗೆ ಸಿಗದಿಹನಗಣಿತ ಘನಚಿದ್ರೂಪನಿಗೆ
ದಿನಮಣಿ ಶಶಿವಹ್ನಿಗಳನು ಅನುದಿನ ಬೆಳಗಿಪಗೆ ।
ಜನಿಮೃತಿ ಇರದಿಹನದ್ವಯ ಚಿನುಮಯನೆನಸಿಹಗೆ
ಮುನಿಜನ ಹೃದಯವಿಹಾರಿಗೆ ಘನಗುರುಮೂರುತಿಗೆ ॥ 2 ॥

ಗಣನೆಗೆ ಸಿಗದಿಹನಗಣಿತ ಘನಚಿದ್ರೂಪನಿಗೆ

ತೈತ್ತಿರೀಯೋಪನಿಷತ್ತಿನಲ್ಲಿ **ಸತ್ಯಂ ಜ್ಞಾನಮನಂತಂ ಬ್ರಹ್ಮ** ಎಂದು ಬ್ರಹ್ಮದ ಸ್ವರೂಪಲಕ್ಷಣವನ್ನು ಹೇಳಿದೆ. ಈ ಉಪನಿಷತ್ತಿನ ವಾಕ್ಯದಲ್ಲಿ ಹೇಳಿದ ಅನಂತ ಎಂಬ ಶಬ್ದಕ್ಕೆ ಸಮಾನಾರ್ಥಕವಾಗಿಯೇ 'ಗಣನೆಗೆ ಸಿಗದಿಹ' ಎಂದು ಆರತಿಗೀತೆಯಲ್ಲಿ ಹೇಳಿದ್ದಾರೆ. ಜ್ಞಾನ ಎಂಬ ಪದಕ್ಕೆ ಪರ್ಯಾಯವಾಗಿ ಘನಚಿದ್ರೂಪನು ಎಂದು ಹೇಳಿದ್ದಾರೆ.

ದಿನಮಣಿಶಶಿವಹ್ನಿಗಳನು ಅನುದಿನ ಬೆಳಗಿಪಗೆ

ಪರಬ್ರಹ್ಮನಿಂದಾಗಿಯೇ ಸೂರ್ಯ, ಚಂದ್ರ, ಅಗ್ನಿ ಮೊದಲಾದ ದೇವತೆಗಳು ನಿತ್ಯದಲ್ಲಿಯೂ ತಮ್ಮ ಕಾರ್ಯವನ್ನು ಮಾಡುತ್ತಾರೆ. ಹೇಗೆ ನೌಕರನೊಬ್ಬನು ತನ್ನ ಮೇಲಿನ ಅಧಿಕಾರಿಗೆ ಹೆದರಿ ತನ್ನ ಕೆಲಸವನ್ನು ಜವಾಬ್ದಾರಿಯಿಂದಲೂ, ಶಿಸ್ತಿನಿಂದಲೂ ನಿರ್ವಹಿಸುತ್ತಾನೆಯೋ ಅದರಂತೆಯೇ ಸೂರ್ಯನೂ, ಚಂದ್ರನೂ ಮತ್ತು ಅಗ್ನಿಯೇ ಮೊದಲಾದ ದೇವತೆಗಳು ಪರಬ್ರಹ್ಮನಿಗೆ ಹೆದರಿ ತಮ್ಮ ತಮ್ಮ ಕಾರ್ಯಗಳನ್ನು ನಿಷ್ಠೆಯಿಂದ ತಪ್ಪದೇ ನಿರ್ದಿಷ್ಟವಾಗಿ ಮಾಡುತ್ತಾರೆ. ತೈತ್ತಿರೀಯ ಉಪನಿಷತ್ತಿನಲ್ಲಿ **'ಭೀಷಾಽಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ । ಭೀಷಾಽಸ್ಮಾದಗ್ನಿಶ್ಚೇಂದ್ರಶ್ಚ । ಮೃತ್ಯುರ್ಧಾವತಿ ಪಂಚಮ ಇತಿ'** ಎಂದು ತಿಳಿಸಿದೆ. ಗುರುಗಳು ಇಂತಹ ಪರಬ್ರಹ್ಮವೇ ಆಗಿರುವುದರಿಂದ ಅವರನ್ನು ದಿನಮಣಿಶಶಿವಹ್ನಿಗಳನು ಅನುದಿನ ಬೆಳಗಿಪಗೆ ಎಂದು ಸ್ತುತಿಸಿದ್ದಾರೆ.

"ತಸ್ಯ ಭಾಸಾ ಸರ್ವಮಿದಂ ವಿಭಾತಿ" ಎಂದು ಕಠೋಪನಿಷತ್ತು ಹೇಳಿದೆ. ಸೂರ್ಯರೇ ಮೊದಲಾದವರನ್ನು ಬೆಳಗುವ ಮಹಾಬೆಳಕು ಆತ್ಮವೆಂದು ಇದು ತಿಳಿಸುತ್ತದೆ. ಅದೇ ಅರ್ಥದಲ್ಲಿ ದಿನಮಣಿಶಶಿವಹ್ನಿಗಳನು ಅನುದಿನ ಬೆಳಗಿಪಗೆ ಎಂದು ಹೇಳಿದೆ ಎಂದೂ ಭಾವಿಸಬಹುವುದು.

ಜನಮೃತಿ ಇರದಿಹನದ್ವಯ ಚಿನುಮಯನೆನಿಸಿಹಗೆ

ಪ್ರಪಂಚದಲ್ಲಿರುವ ಎಲ್ಲ ಪದಾರ್ಥಗಳಿಗೂ ಆರು ವಿಧವಾದ ವಿಕಾರಗಳಿರುತ್ತವೆ. ಅವುಗಳಲ್ಲಿ ಮೊದಲನೆಯದು ಜನನ ಎಂಬುದು ಮತ್ತು ಕೊನೆಯದ್ದು ನಾಶ ಎನ್ನುವುದು. ಇನ್ನು ಉಳಿದ ನಾಲ್ಕು ವಿಕಾರಗಳು *(ಅಸ್ತಿ, ವರ್ಧತೇ, ವಿಪರಿಣಮತೇ ಮತ್ತು ಅಪಕ್ಷೀಯತೇ)* ಜನನ ಮತ್ತು ನಾಶ ಎಂಬ ವಿಕಾರಗಳ ಆಧಾರದಲ್ಲಿಯೇ ಇರುತ್ತವೆ. ಈ ಆರು ರೀತಿಯಾದ ವಿಕಾರಗಳು ಇಲ್ಲದಿರುವುದು ಪರಬ್ರಹ್ಮಸ್ವರೂಪವಾದ ಆತ್ಮಕ್ಕೆ ಮಾತ್ರ.

ಆತ್ಮಸ್ವರೂಪರಾದ ಗುರುಗಳಿಗೆ ಮೊದಲ ಮತ್ತು ಕೊನೆಯ ವಿಕಾರಗಳೇ ಇಲ್ಲವೆಂದ ಮೇಲೆ, ಮಧ್ಯದ ನಾಲ್ಕು ವಿಕಾರಗಳೂ ಇರುವುದಿಲ್ಲವೆಂದು ಸಿದ್ಧವಾಗುತ್ತದೆ. ಆದ್ದರಿಂದ ಮೊದಲ ವಿಕಾರವಾದ ಜನನ ಮತ್ತು ಕೊನೆಯ ವಿಕಾರವಾದ ಮರಣ ಎಂಬುದು ಗುರುಗಳಿಗೆ ಇಲ್ಲವೆಂದು ತಿಳಿಸಲು **ಜನಮೃತಿ ಇರದಿಹನದ್ವಯ ಚಿನುಮಯನೆನಿಸಿಹಗೆ** ಎಂದು ಹೇಳಿದೆ ಎಂದು ತಿಳಿಯಬಹುದು.

ಗುರುಗಳು ದೇಹವನ್ನು ಧರಿಸುವುದು ಕೇವಲ ಸಾಧಕರಿಗೆ ಅನುಗ್ರಹ ಮಾಡುವ ಕಾರಣಕ್ಕಾಗಿ ಆಗಿರುವುದರಿಂದ ಆ ದೇಹವನ್ನು ಅವರು ವಿಸರ್ಜಿಸಿದರೂ ಅವರ ಸ್ವರೂಪಕ್ಕೆ ಯಾವ ರೀತಿಯ ಹಾನಿಯು ಉಂಟಾಗುವುದಿಲ್ಲ. ಏಕೆಂದರೆ ಅವರು ಧರಿಸುವ ಶರೀರವು ಅವರ ಸ್ವರೂಪವೇ ಅಲ್ಲ. ಹಾಗಾದರೆ ಗುರುಗಳ ಸ್ವರೂಪ ಯಾವುದೂ ಎಂಬ ಪ್ರಶ್ನೆಯು ಸಹಜವಾಗಿ ಬರುತ್ತದೆ. ಅದಕ್ಕೆ ಉತ್ತರವಾಗಿ **ಅದ್ವಯ ಚಿನುಮಯನೆನಿಸಿಹಗೆ** ಎಂದು ಮುಂದೆ ಹೇಳಿದೆ.

ಅದ್ವಯ–ಚಿನುಮಯನೆನಿಸಿಹಗೆ

ಅದ್ವಯ – ದೇಶತಃ, ಕಾಲತಃ ಮತ್ತು ವಸ್ತುತಃ ಪರಿಚ್ಛೇದಗಳಿಲ್ಲದ ರೂಪ

ಚಿನುಮಯ – ಜ್ಞಾನಸ್ವರೂಪಿಯೂ ಚೈತನ್ಯರೂಪಿಯೂ ಆಗಿರುವವನು ಎಂದು ತಿಳಿಸಿರುತ್ತಾರೆ.

ದೇಶತಃ ಪರಿಚ್ಛೇದ–ಎಂದರೆ ಒಂದು ಪ್ರದೇಶದಲ್ಲಿ ಇರುವುದು ಮತ್ತು ಇನ್ನೊಂದು ಪ್ರದೇಶದಲ್ಲಿ ಇಲ್ಲದಿರುವುದು. ಈ ಪ್ರಪಂಚದಲ್ಲಿರುವ ಎಲ್ಲ ವಸ್ತುಗಳಿಗೂ (ಆಕಾಶವನ್ನು ಬಿಟ್ಟು) ದೇಶತಃ ಪರಿಚ್ಛೇದ ಇದ್ದೇ ಇರುತ್ತದೆ. ಆದರೇ ಪರಬ್ರಹ್ಮನಿಗೆ ದೇಶತಃ ಪರಿಚ್ಛೇದ ಇರುವುದಿಲ್ಲ.

ಕಾಲ ಪರಿಚ್ಛೇದ–ಎಂದರೆ ಯಾವುದೋ ಒಂದು ಕಾಲದಲ್ಲಿ ಇರುವುದು ಮತ್ತು ಇನ್ನೊಂದು ಕಾಲವಲ್ಲಿ ಇಲ್ಲದಿರುವುದು. ಈ ಪ್ರಪಂಚದಲ್ಲಿರುವ ಎಲ್ಲ ವಸ್ತುಗಳಿಗೂ ಕಾಲತಃ ಪರಿಚ್ಛೇದ ಇದ್ದೇ ಇರುತ್ತವೆ. ಉದಾಹರಣೆಗೆ ಯಾವುದಾದರು ಒಂದು ವಸ್ತುವು ಅದರ ಉತ್ಪಾದನೆಯಾಗುವ ಮೊದಲು ಇರುವುದಿಲ್ಲ ಮತ್ತು ಅದರ ನಾಶವಾದ ಮೇಲೆ ಇರುವುದಿಲ್ಲ ಎಂಬುದು ಪ್ರಸಿದ್ಧವೇ. ಆದರೇ ಪರಬ್ರಹ್ಮನಿಗೆ ಮಾತ್ರ ಕಾಲತಃ ಪರಿಚ್ಛೇದವು ಇರುವುದಿಲ್ಲ.

ವಸ್ತುತಃ ಪರಿಚ್ಛೇದ ಎಂದರೆ ಒಂದು ವಸ್ತುವಿಗೆ ಇಂತಿಷ್ಟೇ ಎಂದು ರೂಪವಿರುತ್ತದೆ. ಘಟವು ಪಟದಲ್ಲಿ ಇರುವುದಿಲ್ಲ, ಪಟವು ಘಟದಲ್ಲಿ ಇರುವುದಿಲ್ಲ ಇತ್ಯಾದಿ. ಆದರೆ ಈ ಪ್ರಪಂಚದ ಎಲ್ಲ ವಸ್ತುವಿಗೂ ಆಧಾರವಾದ (ಉಪಾದಾನವಾದ) ಕಾರಣ ಬ್ರಹ್ಮಕ್ಕೇ ಮಾತ್ರ ವಸ್ತುತಃ ಪರಿಚ್ಛೇದವಿರುವುದಿಲ್ಲ.

ಮುನಿಜನ–ಹೃದಯ–ವಿಹಾರಿಗೆ–ಘನಗುರು–ಮೂರುತಿಗೆ

ಉಪನಿಷತ್ತಿನಲ್ಲಿ ಹೇಳಿರುವ ದಹರವಿದ್ಯೆಯಲ್ಲಿ ಬ್ರಹ್ಮವನ್ನು ಹೃದಯಕಮಲದಲ್ಲಿ ಉಪಾಸಿಸುವ ಕ್ರಮವನ್ನು ತಿಳಿಸಿದೆ. **'ಹೃದಯಂ ಚಾಪ್ಯಧೋಮುಖಂ' 'ನಾಭ್ಯಾಮುಪರಿ ತಿಷ್ಠತಿ' 'ತಸ್ಮಿನ್ ಸರ್ವಂ ಪ್ರತಿಷ್ಠಿತಮ್'** ಮುಂತಾದ ವಾಕ್ಯಗಳು ಹೃದಯಾಕಾಶದ ಮಹಾತ್ಮೆಯನ್ನು ತಿಳಿಸುತ್ತವೆ. ಆದ್ದರಿಂದ ಗುರುವಿಗೆ ಇಲ್ಲಿ ಮುನಿಜನ ಹೃದಯವಿಹಾರಿಗೆ ಎಂದು ಸ್ತುತಿಸಿದ್ದಾರೆ.

ರಜತಮಸಾತ್ವಿಕವಿರಹಿತ ಅಜನೆನಿಸಿರುವವಗೆ
ನಿಜ ಜೀವೇಶರಿಗಾಶ್ರಯ ತ್ರಿಜಗವ್ಯಾಪಕಗೆ ।

ಅಜ ಹರಿ ಹರ ಜಗವಂದಿತ ಭಜಕರ ಸಲಹುವಗೆ
ಸುಜನರ ನಿಜಮೃದು ಹೃದಯದಿ ವಿಜಯದಿ ನಲಿಯುವಗೆ ॥ 3 ॥

ರಜತಮ ಸಾತ್ತ್ವಿಕವಿರಹಿತ ಅಜನೆನಿಸಿರುವವಗೆ

ಸತ್ತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ಮೂರು ಗುಣಗಳು ಇಲ್ಲದಿರುವವನು. ಅಂದರೆ ಶುದ್ಧಸ್ವರೂಪವಾದ ಪರಬ್ರಹ್ಮಸ್ವರೂಪನು ಎಂದು ಅರ್ಥ.

ನಿಜ ಜೀವೇಶರಿಗಾಶ್ರಯ

ಜೀವರಿಗೂ ಈಶ್ವರನಿಗೂ ನಿಜವಾದ ಆಶ್ರಯ ಪರಬ್ರಹ್ಮವೇ ಆಗಿದೆ. ಪರಬ್ರಹ್ಮವು ಮಾಯಾತೀತವು. ಈ ಪರಬ್ರಹ್ಮವೇ ಮಾಯೆಯೆಂಬ ಉಪಾಧಿಯಿಂದ ಈಶ್ವರನಾಗಿಯೂ, ಅವಿದ್ಯೆಯೆಂಬ ಉಪಾಧಿಯಿಂದ ಜೀವನಾಗಿಯೂ ತೋರುತ್ತದೆ. ಹೀಗೆ ಅವಿದ್ಯೆ ಮತ್ತು ಮಾಯೆ ಎಂಬ ಎರಡು ಉಪಾಧಿಗಳಿಂದ ಪರಬ್ರಹ್ಮದಲ್ಲೇ ಜೀವತ್ವವು ಮತ್ತು ಈಶ್ವರತ್ವವು ಕಲ್ಪಿತವಾದ್ದರಿಂದ ಜೀವರಿಗೂ ಮತ್ತು ಈಶ್ವರನಿಗೂ ಪರಬ್ರಹ್ಮವೇ ನಿಜ ಆಧಾರ. ಈ ಕಾರಣದಿಂದಾಗಿ **ನಿಜಜೀವೇಶರಿಗಾಶ್ರಯ** ಎಂದು ಹೇಳಿದ್ದಾರೆ.

ತ್ರಿಜಗವ್ಯಾಪಕಗೆ ಪರಮಾತ್ಮನು ಬ್ರಹ್ಮಾಂಡವನ್ನು ಪೂರ್ಣವಾಗಿ ವ್ಯಾಪಿಸಿದ್ದಾನೆ. **'ಸ ಭೂಮಿಂ ವಿಶ್ವತೋ ವೃತ್ವಾ'** ಎಂದು ಪುರುಷಸೂಕ್ತವು ಹೇಳಿರುತ್ತದೆ. ಇದು ಆತ್ಮನು ತ್ರಿವಿಧಪರಿಚ್ಛೇದರಹಿತನು ಎಂಬುದನ್ನು ನೆನಪಿಸಿ ಕೊಡುತ್ತದೆ.

ಅಜಹರಿಹರ ಜಗವಂದಿತ ಭಜಕರ ಸಲಹುವಗೆ

ಬ್ರಹ್ಮ, ಹರಿ ಮತ್ತು ಹರರೂಪಿಯು (ತ್ರಿಮೂರ್ತ್ಯಾತ್ಮಕನು) ಶ್ರೀಗುರುವು. ಅವನು ಸಂಪೂರ್ಣ ಜಗತ್ತಿನಿಂದಲೂ ವಂದಿಸಲ್ಪಟ್ಟಿರುತ್ತಾನೆ ಮತ್ತು ತನ್ನ ಭಜಕರನ್ನು ಸಹಲುವವನಾಗಿರುತ್ತಾನೆ ಎಂದು ಇಲ್ಲಿ ತೋರಿಸಿಕೊಟ್ಟಿದ್ದಾರೆ.

ಸುಜನರ ನಿಜ ಮೃದು ಹೃದಯದಿ ವಿಜಯದಿ ನಲಿಯುವಗೆ

ಹಿಂದಿನ ಚರಣದಲ್ಲಿ "ಮುನಿಜನ ಹೃದಯ ವಿಹಾರಿಗೆ ಘನಗುರು ಮೂರುತಿಗೆ" ಎಂಬ ಸಾಲಿನ ಅರ್ಥವನ್ನೇ ಇದು ಹೇಳುತ್ತದೆ. ಅಲ್ಲಿ ಉಪಾಸನಾ ಪರವಾದ ಅರ್ಥವನ್ನು ಹೇಳಿದ್ದು ಇಲ್ಲಿ ವೇದಾಂತವಿಚಾರವನ್ನು ಈ ಕೆಳಗಿನಂತೆ ತಿಳಿಯಬಹುದಾಗಿದೆ.

ಬ್ರಹ್ಮವು ವಾಕ್ಕು ಮತ್ತು ಮನಸ್ಸಿಗೂ ಮೀರಿರುತ್ತದೆ. ಬ್ರಹ್ಮವು ಮಾತಿನಿಂದಲೂ ಮತ್ತು ಮನಸ್ಸಿನಿಂದಲೂ ತಿಳಿಯಲು ಆಗದಂತಹದ್ದು ಎಂದು ಶ್ರುತಿಯು ತಿಳಿಸುತ್ತದೆ. **(ಅಪ್ರಾಪ್ಯ ಮನಸಾ ಸಹ– ತೈತ್ತಿರೀಯ)**

ಹೀಗಿದ್ದರೂ ಆಚಾರ್ಯರ ಮುಖದಿಂದ ದೊರೆತ ಶಾಸ್ತ್ರದ ಉಪದೇಶ, ಹಾಗೆಯೇ ಶಮದಮಾದಿಗಳ ಸಾಧನೆಯಿಂದ ಮನಸ್ಸು ಸಂಸ್ಕೃತವಾದರೆ ಅಂತಹ ಮನಸ್ಸಿನಿಂದ ಬ್ರಹ್ಮವು

ತಿಳಿಯಲ್ಪಡುತ್ತದೆ ಎಂದು ಮನಸೈವಾನುದ್ರಷ್ಟವ್ಯಮ್ ಎಂಬ ಶ್ರುತಿಯು ತಿಳಿಸುತ್ತದೆ. (ಶಾಸ್ತ್ರಾಚಾರ್ಯೋಪದೇಶಶಮದಮಾದಿಭಿಃ ಸಂಸ್ಕೃತಂ ಮನಃ ಆತ್ಮದರ್ಶನೇ ಕರಣಮ್ - ಗೀತಾಭಾಷ್ಯ) ಈ ಅರ್ಥವನ್ನೇ ಆರತಿ ಗೀತೆಯಲ್ಲಿ ಅಳವಡಿಸಲಾಗಿದೆ ಎಂದು ತಿಳಿಯಬಹುದು. ಸುಜನರ ಎಂದರೆ ಸಾಧನಾಪರರಾದ (ಶಮದಮಾದಿಗಳ ಅಭ್ಯಾಸಪರರಾದ) ಜನರುಗಳು. ಅವರ ಮೃದು ಹೃದಯವೆಂದರೆ ಸಂಸ್ಕೃತವಾದ ಮನಸ್ಸು ಎಂದು ಅರ್ಥ. ಇಂತಹ ಸಂಸ್ಕೃತ ಮನಸ್ಸಿನಲ್ಲಿ ಬ್ರಹ್ಮವಿದ್ಯೆಯು ವಿಲಾಸವನ್ನು ಮಾಡುತ್ತದೆ. ಅದನ್ನೇ ಇಲ್ಲಿ ವಿಜಯದಿ ನಲಿಯುವಗೇ ಎಂದು ತಿಳಿಸಿದ್ದಾರೆ.

ಸಾಧನೆಯಿಂ ಪರಿಪಕ್ವದ ಸಾಧಕ ಜನಮನಕೆ
ಮೋದದಿ ತನ್ನಯ ತತ್ತ್ವದ ಬೋಧವನರುಹಲಿಕೆ ।
ಆದಿ ಮೂರುತಿ ಶ್ರೀಪ್ರಭು ತಾ ದಯಗೊಳ್ಳುತಲಿ
ಮೇದಿನಿಯೊಳಗವತರಿಸಿಹ ಶ್ರೀಧರನಾಮದಲಿ ॥ 4 ॥

ಸಾಧನೆಯಿಂ ಪರಿಪಕ್ವದ ಸಾಧಕ ಜನಮನಕೆ

ಏನನ್ನು ಸಾಧಿಸುವುದಾದರೂ ಅದಕ್ಕೊಂದು ಸಾಧನಾಪಥವೆಂದು ಇರುತ್ತದೆ. ತನ್ನ ನಿಜಸ್ವರೂಪವಾದ ಆನಂದಸ್ವರೂಪವನ್ನು ಪಡೆಯಲು ಅಂದರೆ ಮೋಕ್ಷವನ್ನು ಹೊಂದಲು ಕೂಡ ಶಾಸ್ತ್ರವು ಉಪದೇಶಿಸಿದ ಮಾರ್ಗದಲ್ಲಿ ನಡೆಯುವುದು ಅತ್ಯವಶ್ಯವಾಗಿರುತ್ತದೆ. ಈ ಸಾಧನಾಪಥದಲ್ಲಿ ಮೊದಲು ಬರುವುದು ಕರ್ಮಯೋಗ.

ಕರ್ಮಯೋಗ :

ಕರ್ಮಯೋಗ ಎಂದರೆ ಶ್ರುತಿಯೇ ಮೊದಲಾದ ಶಾಸ್ತ್ರವು ಉಪದೇಶಿಸಿರುವ ಕರ್ಮಗಳನ್ನು, ಕೇವಲ ಈಶ್ವರಾರ್ಪಣಬುದ್ಧಿಯಿಂದ ಮಾಡುವುದು ಹಾಗೆಯೇ ಅದರಿಂದ ಬರುವ ಫಲಗಳಲ್ಲಿ ಯಾವ ಅಪೇಕ್ಷೆಯನ್ನು ಇಟ್ಟುಕೊಳ್ಳದಿರುವುದು. ಹೀಗೆ ಕರ್ಮವನ್ನು ಮಾಡುವುದರಿಂದ ಚಿತ್ತಶುದ್ಧಿಯು ಉಂಟಾಗುತ್ತದೆ.

ಕರ್ಮವು ಸ್ವಾಭಾವಿಕವಾಗಿ ಬಂಧಕವೇ ಆದರೂ, ಅದನ್ನು ಮೇಲೆ ಹೇಳಿದಂತೆ ಅನುಷ್ಠಾನ ಮಾಡುವುದರಿಂದ ಬಂಧಕವೇ ಆದ ಕರ್ಮವೂ ಮೋಚಕದಂತೆ ಕೆಲಸ ಮಾಡುತ್ತದೆ. ಚಿತ್ತಶುದ್ಧಿಯನ್ನು ಸಂಪಾದಿಸುವುದರಲ್ಲಿ ಸಹಾಯಕವಾಗುತ್ತದೆ. ಚಿತ್ತಶುದ್ಧಿಯಿಲ್ಲದೇ ವೇದಾಂತದಲ್ಲಿ ರುಚಿಯೂ ಏರ್ಪಡುವುದಿಲ್ಲ ಮತ್ತು ಅದರ ಶ್ರವಣಾದಿಗಳನ್ನು ಮಾಡಲು ಯೋಗ್ಯತೆಯೂ ಉಂಟಾಗುವುದಿಲ್ಲ. ಹಾಗಾಗಿ ಕರ್ಮಯೋಗವು ಬಹು ಮುಖ್ಯವಾಗಿರುತ್ತದೆ.

ಉಪಾಸನಾ

ಉಪಾಸನೆ ಎಂದರೆ ಶಾಸ್ತ್ರವು ಹೇಳಿದ ಆಲಂಬನೆಯಲ್ಲಿ (ದೇವತಾರೂಪ ಇತ್ಯಾದಿಗಳಲ್ಲಿ) ಮನಸ್ಸನ್ನು ಪೂರ್ಣವಾಗಿ ಇಡುವುದು ಮತ್ತು ಅನ್ಯ ವಿಷಯಗಳಿಂದ ವಿಚಲಿತವಾಗುವುದಕ್ಕೆ ಅವಕಾಶ ಕೊಡದಿರುವುದು. ಇದರಿಂದ "ಏಕಾಗ್ರತೆಯು" ಉಂಟಾಗುತ್ತದೆ.

ಈ ಕರ್ಮಯೋಗ ಮತ್ತು ಉಪಾಸನೆ ಎನ್ನುವುದು ಸಾಧನೆಯಲ್ಲಿ ಪ್ರಥಮ ಹೆಜ್ಜೆ ಮತ್ತು ದ್ವಿತೀಯ ಹೆಜ್ಜೆ. ಇದನ್ನು ಮಾಡಿದಾದ ಸಾಧಕನ ಮನಸ್ಸು ಪರಿಪಕ್ವವಾಗುತ್ತದೆ. ವೇದಾಂತದ ಅಧ್ಯಯನಾದಿಗಳಿಗೆ (ಜ್ಞಾನಮಾರ್ಗಕ್ಕೆ) ಯೋಗ್ಯತೆಯು ಉಂಟಾಗುತ್ತದೆ. ಈ ಅರ್ಥವನ್ನೇ 'ಸಾಧನೆಯಿಂ ಪರಿಪಕ್ವದ ಸಾಧಕ ಜನಮನಕೆ' ಎಂದು ಆರತಿ ಗೀತೆಯಲ್ಲಿ ಹೇಳಿದ್ದಾರೆ.

ಮೋದದಿ ತನ್ನಯ ತತ್ತ್ವದ ಬೋಧವನರುಹಲಿಕೆ
ಆದಿಮೂರುತಿ ಶ್ರೀಪ್ರಭು ತಾ ದಯಗೊಳ್ಳುತಲಿ ।
ಮೇದಿನಿಯೊಳಗವತರಿಸಿದ ಶ್ರೀಧರ ನಾಮದಲಿ

ಚಿತ್ತಶುದ್ಧಿ ಮತ್ತು ಏಕಾಗ್ರತೆಗಳನ್ನು ಸಂಪಾದಿಸಿದ ನಂತರದಲ್ಲಿ ಸದ್ಗುರುವಿನ ಸೇವೆಯನ್ನು ಮಾಡಿ ಅವರಿಂದ ಉಪನಿಷತ್ತಿನ ತತ್ತ್ವವನ್ನು ತಿಳಿಯಬೇಕಾಗುತ್ತದೆ. ಆದ್ದರಿಂದ ಸಾಧಕಜನರಿಗೆ ತನ್ನಯ ತತ್ತ್ವದ ಬೋಧೆಯನ್ನು ಮಾಡಲು ಅಂದರೆ ತನ್ನ ನಿಜಸ್ವರೂಪವಾದ ಪರಬ್ರಹ್ಮರೂಪದ ತತ್ತ್ವವನ್ನು ಬೋಧಿಸುವ ಸಲುವಾಗಿ ಆದಿಮೂರುತಿಯಾದ ಈಶ್ವರನೇ ಕೃಪಾದೃಷ್ಟಿಯಿಂದ ಭೂಮಿಯಲ್ಲಿ ಶ್ರೀಧರನೆಂಬ ನಾಮವನ್ನು ಧರಿಸಿ ಅವತರಿಸಿದ್ದಾನೆ ಎಂದು ಈ ಮೇಲಿನ ವಾಕ್ಯಗಳ ಅರ್ಥವಾಗಿರುತ್ತದೆ.

'ಸ್ಯಾತ್ಪರಮೇಶ್ವರಸ್ಯಾಪಿ ಇಚ್ಛಾವಶಾನ್ಮಾಯಾಮಯಂ ರೂಪಂ ಸಾಧಕಾನುಗ್ರಹಾರ್ಥಮ್' ಅಂದರೆ "ಸಾಧಕರಿಗೆ ಅನುಗ್ರಹ ಮಾಡಬೇಕೆಂಬ ಕಾರಣಕ್ಕಾಗಿ ಪರಮೇಶ್ವರನೂ ಕೂಡಾ ತನ್ನ ಇಚ್ಛಾವಶವಾದ ಮಾಯಾಮಯ ರೂಪವನ್ನು ಧರಿಸುತ್ತಾನೆ" ಎಂದು ಶ್ರೀಶಂಕರಭಗವತ್ಪಾದರು ತಿಳಿಸಿದ್ದಾರೆ. ಇಲ್ಲಿ ಸಾಧಕಾನುಗ್ರಹಾರ್ಥವಾಗಿ ಹೊಂದುವ ರೂಪವೆಂದರೆ ಕೇವಲ ದೇವತಾರೂಪವೆಂದಷ್ಟೇ ಅಲ್ಲದೇ ನಮಗೆ ಅನುಗ್ರಹ ಮಾಡಲು ಸಾಕ್ಷತ್ ಈಶ್ವರನಿಂದ ಪ್ರಾರಂಭವಾಗಿ ಭಗವಾನ್ ವೇದವ್ಯಾಸರು, ಭಗವಾನ್ ಶಂಕರಭಗವತ್ಪಾದರು ಹಾಗೆಯೇ ಇಂದಿನವರೆಗೂ ಹರಿದುಬಂದಿರುವ ಬ್ರಹ್ಮವಿದ್ಯಾಚಾರ್ಯರುಗಳೆಲ್ಲರೂ ಈಶ್ವರನ ರೂಪವೇ ಎಂದು ತಿಳಿಯಬಹುದು. ಅದೇ ಅರ್ಥವನ್ನು ಆರತಿಗೀತೆಯ ಕೊನೆಯ ಭಾಗದಲ್ಲಿ ಇರಿಸಿದ್ದಾರೆ.

॥ ಶ್ರೀಧರಾಯ ನಮೋ ನಮಃ ॥